**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ**

ಸಿ.ಸಿ.ನಂಃ 3613/2023 ಸಿ.ಡಬ್ಲ್ಯೂ –07 ಪಿ.ಡಬ್ಲ್ಯೂ -06

| | | |
|---|---|---|
| ಹೆಸರು | ಃ | ಜ್ಯೋತಿರ್ಲಿಂಗ |
| ತಂದೆ | ಃ | ಹಣಮಂತ |
| ವಯಸ್ಸು | ಃ | 35 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | ಃ | ಮಮದಾಪೂರ |

ದಿನಾಂಕಃ 26-06.2025

ಸತ್ಯ ಪ್ರತಿಜ್ಞೆಯ ಮೇರೆ ಗೆ

---

**ಮುಖ್ಯ ವಿಚಾರಣೆ ಮಾನ್ಯ ಸ.ಸ.ಅ ಅವರಿಂದಃ-**

ಆರೋಪಿತರು ನನ್ನ ಸಂಬಂಧಿಕರು ಆಗಬೇಕು. ಚಾಸಾ- 1 ನನ್ನ ಅತ್ತಿಗೆ ಆಗಬೇಕು. ಚಾಸಾ- 4 ನನ್ನ ಅಣ್ಣನಾಗಬೇಕು. ಚಾಸಾ-5 ನನ್ನ ಹೆಂಡತಿ ಆಗಬೇಕು. ಚಾಸಾ- 6 ನನ್ನ ತಾಯಿ ಆಗಬೇಕು. ಚಾಸಾ- 2, 3, 8 ಮತ್ತು 9 ಪರಿಚಯ ಇರುತ್ತಾರೆ. ದಿಃ 27-03-2023 ರಂದು ನಮ್ಮ ಅತ್ತಿಗೆ ಚಾಸಾ- 1 ರವರು ಹೊಲಕ್ಕೆ ಹೋದಾಗ ಆರೋಪಿ ನಂ. 1, 2 ಮತ್ತು 6 ರವರು ಹೊಲದಲ್ಲಿ ಜೋಳ ಕೊಯ್ಯಿಯುವಾಗ ಚಾಸಾ- 1 ರವರಿಗೆ ಬೈದಿರುತ್ತಾರೆ. ನಂತರ ಮರುದಿನ ದಿಃ 28-03-2023 ರಂದು ಬೆಳಿಗ್ಗೆ 8.30 ಕ್ಕೆ ನಾನು ಹೊಲಕ್ಕೆ ಹೋಗಿ 9.30 ಗಂಟೆಗೆ ಮರಿಳಿ ಬಂದಿರುತ್ತೇನೆ. ಆಗ ಚಾಸಾ- 4 ರವರು ನನಗೆ ಬೆಳಿಗ್ಗೆ 8.50 ಗಂಟೆಗೆ ಆರೋಪಿತರು ನಮ್ಮ ಮನೆಯ ಎದುರಿನ ರಸ್ತೆಯ ಮೇಲೆ ಬಂದು ನಿಂತು ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದಾಗ ಚಾಸಾ- 1 ರವರು ಹೊರಗೆ ಬಂದು ಯಾಕೆ ಬಯ್ಯುತ್ತಿದ್ದಿರಿ ನ್ಯಾಯಾಲಯದಲ್ಲಿ ದಾವೆ ಚಾಲ್ತಿಯಲ್ಲಿ ಇದೆ ಎಂದು ಹೇಳಿದಾಗ ಆರೋಪಿ 2, 4 ಮತ್ತು 6 ರವರು ಚಾಸಾ-1 ರವರಿಗೆ ಹೊಡೆಯುತ್ತಿದ್ದಾಗ ಶಬ್ದ ಕೇಳಿ ಚಾಸಾ-4 ಮತ್ತು 5 ರವರು ಹೊರಗೆ ಜಗಳ ಬಿಡಿಸಲು ಹೋಗಿರುತ್ತಾರೆ. ಆಗ ಆರೋಪಿ 3 ಮತ್ತು 4 ರವರು ಚಾಸಾ-4 ಮತ್ತು 5 ರವರಿಗೆ ಹೊಡೆದಿರುತ್ತಾರೆ. ಅದನ್ನು ನೋಡಿ ಚಾಸಾ-6 ರವರು ಜಗಳ ಮಾಡುವುದು ಸರಿ ಅಲ್ಲ ಎಂದು ತಿಳಿಸಲು ಹೋದಾಗ ಆಗ 6 ನೇ ಆರೋಪಿಯು ಚಾಸಾ- 6 ರವರಿಗೆ ಹೊಡೆಬಡೆ ಮಾಡಿರುತ್ತಾರೆ. ಸದರಿ ಜಗಳನ್ನು ನೋಡಿ ಚಾಸಾ-8 ಮತ್ತು 9 ರವರು ಬಿಡಲು ಬಂದಾಗ ಆರೋಪಿತರೆಲ್ಲರೂ ಈ ಸಾರಿ ಉಳಿದಿದ್ದಿರಿ ಇನ್ನೊಮ್ಮೆ ಸಿಕ್ಕರೆ ಬಿಡುವುದಿಲ್ಲ ಎಂದು ಹೇಳಿ

ಹೋಗಿರುತ್ತಾರೆ. ನಂತರ ನಾನು ಮತ್ತು ಚಾಸಾ- 4 ರವರು ಚಾಸಾ- 1, 5 ಮತ್ತು 6 ರವರನ್ನು ಆಸ್ಪತೆಗೆ ಕರೆದುಕೊಂಡು ಹೋಗಿರುತ್ತೇವೆ.

**<u>ಪಾಟೀ ಸವಾಲುಃ ಆರೋಪಿತರ ಪರಃ ಶ್ರೀ.ಎಸ್. ಎಸ್. ಸಿ. ವಕೀಲರಿಂದಃ</u>**

ಸದರಿ ಪ್ರಕರಣವನ್ನು ಮಾಡುವುದಕ್ಕಿಂತ ಮುಂಚಿತವಾಗಿ 1 ನೇ ಆರೋಪಿಯು ನಮ್ಮ ಮನೆಯವರ ವಿರುದ್ಧ ಇನ್ನೂ ಎರಡು ಪ್ರಕರಣಗಳನ್ನು ದಾಖಲಿಸಿದ್ದರು ಎಂದರೆ ಸರಿ. ಸದರಿ ಪ್ರಕರಣವು ಸರ್ವೆ ನಂಬರ 9/1 ಒಟ್ಟು 8 ಎಕರೆ 24 ಗುಂಟೆ ಜಮೀನಿಗೆ ಹೋಗಿ ನಾವು ಅವರಿಗೆ ಅಡೆತಡೆ ಮಾಡಿದ್ದೇವೆ ಎಂದು ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿ. ಸದರಿ ಜಮೀನಿನ ಪೂರ್ವ ದಿಕ್ಕಿಗೆ ನಮಗೆ ಸೇರಿದ ಸರ್ವೆ ನಂಬರ 9/2, ಒಟ್ಟು 12 ಎಕರೆ 20 ಗುಂಟೆ ಜಮೀನು ಇರುತ್ತದೆ ಎಂದರೆ ಸರಿ. ಅದೇ ರೀತಿ ಪಶ್ಚಿಮ ದಿಕ್ಕಿಗೆ 1 ನೇ ಆರೋಪಿಗೆ ಸೇರಿದ 8 ಎಕರೆ 24 ಗುಂಟೆ ಜಮೀನು ಇರುತ್ತದೆ ಎಂದರೆ ಸಾಕ್ಷಿಯು ಅವರ ಹೆಸರಿನಲ್ಲಿ ಇರುತ್ತದೆ, ಆದರೆ ಅವರ ಕಬ್ಜೆಯಲ್ಲಿ ಇರುವುದಿಲ್ಲ ಎಂದು ನುಡಿಯುತ್ತಾರೆ. 1 ನೇ ಆರೋಪಿಯವರೆ ಸದರಿ ಜಮೀನಿನಲ್ಲಿ ಕಬ್ಜೆಯಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ನಮ್ಮ 12 ಎಕರೆ 20 ಗುಂಟೆ ಜಮೀನಿನಲ್ಲಿ ನಾವು ಜಮೀನು ಮಾರಾಟ ಮಾಡಿರುತ್ತೇವೆ ಎಂದರೆ ಸರಿ. ಈಗ 4 ಎಕರೆ ಜಮೀನು ಉಳಿದಿರುತ್ತದೆ. ಸಾಕ್ಷಿಯು ಮುಂದುವರೆದು ಎರಡುವರೆ ಎಕರೆ ಜಮೀನನ್ನು ಒತ್ತೆ ಇಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ದಿಃ 27-03-2023 ರಂದು ಚಾಸಾ 1 ರವರು ಸರ್ವೆ ನಂಬರ 6 ರಲ್ಲಿ ಕೆಲಸ ಮಾಡಲು ಹೋಗಿದ್ದರು. ಸರ್ವೆ ನಂಬರ 6 ಕ್ಕೆ ಸಂಬಂದಿಸಿದಂತೆ ಯಾವುದೇ ತಕರಾರು ಇಲ್ಲ ಎಂದರೆ ಸರಿ. ಜಗಳವನ್ನು ನಾನು ಕಣ್ಣಾರೆ ನೋಡಿಲ್ಲ ಎಂದರೆ ಸರಿ. ನಾನು ಜಮೀನಿನಿಂದ ಮನೆಗೆ ಬಂದಾಗ ಘಟನಾ ಸ್ಥಳದಲ್ಲಿ ನಮ್ಮ ಮನೆಯವರು ಮಾತ್ರ ಇದ್ದರು. ಘಟನೆ ನಡೆದ ನಂತರ ಚಾಸಾ-1, 4 ರಿಂದ 6 ರವರು ಬಸ್ಸಿನ ಮೂಲಕ ಆಸ್ಪತ್ರೆಗೆ ಹೋಗಿರುತ್ತಾರೆ, ನಾನು ದ್ವಿಚಕ್ರ ವಾಹನದ ಮೇಲೆ ಹೋಗಿರುತ್ತೇನೆ. ನಾವು ಆಳಂದ ಸರ್ಕಾರಿ ಆಸ್ಪತ್ರೆಗೆ ಬಂದಾಗ ಬೆಳಿಗ್ಗೆ 10.30 ಆಗಿತ್ತು. ನಾನು ಮತ್ತು ಚಾಸಾ 1, 4 ರಿಂದ 6 ರವರು ಮಾತ್ರ ಆಸ್ಪತ್ರೆಗೆ ಬಂದಿರುತ್ತೇವೆ. ನಮ್ಮ ಜೊತೆ ಬೇರೆ ಯಾರು ಬಂದಿರುವುದಿಲ್ಲ. ಆಸ್ಪತ್ರೆಯಲ್ಲಿ ಎಷ್ಟು ಸಮಯ ಇದ್ದೇವು ಅಂತಾ ನನಗೆ ಹೇಳಲು ಬರುವುದಿಲ್ಲ. ಆಸ್ಪತ್ರೆಯಲ್ಲಿ ಪೋಲಿಸರು ನಮ್ಮ ಹೇಳಿಕೆ ಪಡೆದಿರುವುದಿಲ್ಲ. ನನ್ನ ಹೇಳಿಕೆಯನ್ನು ದಿಃ 29-03-2023 ರಂದು ನಮ್ಮ ಊರಿನಲ್ಲಿ ತೆಗೆದುಕೊಂಡಿರುತ್ತಾರೆ. ನನ್ನ ಹೇಳಿಕೆಯನ್ನು ತೆಗೆದುಕೊಳ್ಳುವಾಗ ಅಲ್ಲಿ ಯಾರು ಇರಲಿಲ್ಲ.

ಆಗ ಸಮಯ ಎಷ್ಟು ಆಗಿತ್ತು ಅಂತಾ ನಾನು ನೋಡಿರುವುದಿಲ್ಲ. ನನ್ನ ಹೇಳಿಕೆಯನ್ನು ಪೋಲಿಸರು ಬರೆದುಕೊಂಡಿರುತ್ತಾರೆ.ನನ್ನ ಎದುರಿಗೆ ಟೈಪ್ ಮಾಡಿರುವುದಿಲ್ಲ.

2. ನಾನು 1 ನೇ ಆರೋಪಿಯ ವಿರುದ್ದ ಹಿರಿಯ ದಿವಾಣಿ ನ್ಯಾಯಾಲಯದಲ್ಲಿ ದಾವೆ ಮಾಡಿರುತ್ತೇನೆ ಎಂದರೆ ಸರಿ. ನನ್ನ ಹೇಳಿಕೆಯಲ್ಲಿ ದಿಃ 27-03-2023 ರಂದು 1 ನೇ ಆರೋಪಿಯು ಚಾಸಾ 1 ರವರಿಗೆ ಅವಾಚ್ಯವಾಗಿ ಬೈದ ಬಗ್ಗೆ ಹೇಳಿರುವುದಿಲ್ಲ. ದಿಃ 28-03-2023 ರಂದು ನಾನೇ ಜಗಳ ತೆಗೆದು ಆರೋಪಿತರಿಗೆ ಹೊಡೆಬಡಿ ಮಾಡಿ ಅವರ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು 1 ನೇ ಆರೋಪಗೆ ಹೊಡೆ ಬಡಿ ಮಾಡಿದ ಕಾರಣ ದಿಃ 28-03-2023 ರಂದು ಬೆಳಿಗೆ 8.19 ಗಂಟೆಗೆ ಅವರು ಆಸ್ಪತ್ರೆಯಲ್ಲಿ ದಾಖಲು ಆಗಿದ್ದರು ಎಂದರೆ ಸರಿಯಲ್ಲ. 1 ನೇ ಆರೋಪಿಯು ನಮ್ಮ ವಿರುದಲ್ದ ಪ್ರಕರಣವನ್ನು ದಾಖಲಿಸಲು ಹೋದಾಗ ಪೋಲಿಸರೊಂದಿಗೆ ಶಾಮಿಲಾಗಿ ಪ್ರಕರಣವನ್ನು ತೆಗೆದುಕೊಳ್ಳದಂತೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಜಗಳದಲ್ಲಿ ಯಾರಿಗೂ ರಕ್ತಗಾಯ ಆಗಿರುವುದಿಲ್ಲ, ಆದರೆ ಗುಪ್ತ ಗಾಯಗಳು ಆಗಿರುತ್ತವೆ.

ದಿಃ 27-03-2023 ರಂದು ನಮ್ಮ ಅತ್ತಿಗೆ ಚಾಸಾ- 1 ರವರು ಹೊಲಕ್ಕೆ ಹೋದಾಗ ಆರೋಪಿ ನಂ. 1, 2 ಮತ್ತು 6 ರವರು ಹೊಲದಲ್ಲಿ ಜೋಳ ಕೊಯ್ಯಿಯುವಾಗ ಚಾಸಾ- 1 ರವರಿಗೆ ಬೈದಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಮರುದಿನ ದಿಃ 28-03-2023 ರಂದು ಬೆಳಿಗ್ಗೆ 8.30 ಕ್ಕೆ ನಾನು ಹೊಲಕ್ಕೆ ಹೋಗಿ 9.30 ಗಂಟೆಗೆ ಮರಳಿ ಬಂದಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆಗ ಚಾಸಾ- 4 ರವರು ನನಗೆ ಬೆಳಿಗ್ಗೆ 8.50 ಗಂಟೆಗೆ ಆರೋಪಿತರು ನಮ್ಮ ಮನೆಯ ಎದುರಿನ ರಸ್ತೆಯ ಮೇಲೆ ಬಂದು ನಿಂತು ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದಾಗ ಚಾಸಾ- 1 ರವರು ಹೊರಗೆ ಬಂದು ಯಾಕೆ ಬಯ್ಯುತ್ತಿದ್ದಿರಿ ನ್ಯಾಯಾಲಯದಲ್ಲಿ ದಾವೆ ಚಾಲ್ತಿಯಲ್ಲಿ ಇದೆ ಎಂದು ಹೇಳಿದಾಗ ಆರೋಪಿ 2, 4 ಮತ್ತು 6 ರವರು ಚಾಸಾ-1 ರವರಿಗೆ ಹೊಡೆಯುತ್ತಿದ್ದಾಗ ಶಬ್ದ ಕೇಳಿ ಚಾಸಾ-4 ಮತ್ತು 5 ರವರು ಹೊರಗೆ ಜಗಳ ಬಿಡಿಸಲು ಹೋಗಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆಗ ಆರೋಪಿ 3 ಮತ್ತು 4 ರವರು ಚಾಸಾ-4 ಮತ್ತು 5 ರವರಿಗೆ ಹೊಡೆದಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದನ್ನು ನೋಡಿ ಚಾಸಾ-6 ರವರು ಜಗಳ ಮಾಡುವುದು ಸರಿ ಅಲ್ಲ ಎಂದು ತಿಳಿಸಲು ಹೋದಾಗ ಆಗ 6 ನೇ ಆರೋಪಿಯು

ಚಾಸಾ- 6 ರವರಿಗೆ ಹೊಡೆಬಡೆ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಜಗಳನ್ನು ನೋಡಿ ಚಾಸಾ-8 ಮತ್ತು 9 ರವರು ಬಿಡಲು ಬಂದಾಗ ಆರೋಪಿತರೆಲ್ಲರೂ ಈ ಸಾರಿ ಉಳಿದಿದ್ದಿರಿ ಇನ್ನೊಮ್ಮೆ ಸಿಕ್ಕರೆ ಬಿಡುವುದಿಲ್ಲ ಎಂದು ಹೇಳಿ ಹೋಗಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ನಾನು ಮತ್ತು ಚಾಸಾ- 4 ರವರು ಚಾಸಾ- 1, 5 ಮತ್ತು 6 ರವರನ್ನು ಆಸ್ಪತೆಗೆ ಕರೆದುಕೊಂಡು ಹೋಗಿರುತ್ತೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ- ಇರುವುದಿಲ್ಲ.</u>

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಮ.ಎಫ್.ಸಿ ಆಳಂದ